ಬ್ರಾಹ್ಮಣೇಯ ಮಡಿಮೈಲಿಗೆಯ ಭೇದಭಾವ. ಸ್ಪ್ಯಾನಿಶ್ ನುಡಿಯನ್ನಾಡುವ ಸಮಾಜಗಳಲ್ಲಿರುವ ಜಾತಿ ತಾರತಮ್ಯದಂಥದ್ದೇ ಆದ ಜನಾಂಗೀಯ ತಾರತಮ್ಯ. ಹಾಗಾಗಿಯೇ, ರಾಯಭಾರಿಯಾದ ತಾನು ಒಬ್ಬ ಮಲಹೊರುವ ಅಸ್ಪೃಶ್ಯ ಮಹಿಳೆಯನ್ನು ಭೋಗಿಸುವುದನ್ನು ಕಾವ್ಯಾತ್ಮಕ ಗದ್ಯದಲ್ಲಿ ಬಣ್ಣಿಸುವುದರ ಮೂಲಕ ಸೋಗಿನ ಪ್ರಾಮಾಣಿಕತೆಯನ್ನು ಪ್ರದರ್ಶಿಸುತ್ತಲೇ ಅಶ್ಲೀಲತೆಯತ್ತ ಮುಖ ಮಾಡುತ್ತಾರೆ. ತನ್ನ ಪದವಿಯ ಮೂಲಕ ಅನಾಯಾಸವಾಗಿ ಒದಗಿದ ಮಾನವನ್ನು ಇಂತಹ ಕಾರ್ಯಕ್ಕೆ ಸಹಕರಿಸದೇ ಹೋದಲ್ಲಿ ಉದ್ಯೋಗ ಕಳೆದುಕೊಳ್ಳಬಹುದಾದ ಅಸಹಾಯಕ ಮಹಿಳೆಯ ಶೀಲಹರಣಕ್ಕೆ ದುರ್ಬಳಕೆ ಮಾಡಿಬಿಡುತ್ತಾರೆ. "ಅವಳು ಓಡಾಡುವ ದಾರಿಯಲ್ಲಿ ಸಣ್ಣಪುಟ್ಟ ಉಡುಗೊರೆಗಳನ್ನು ಇಡುತ್ತಿದ್ದೆ... ರೇಶಿಮೆ ಬಟ್ಟೆ, ಹಣ್ಣು ಹೀಗೆ" ಎಂದು ಹುಸಿ ಸಹಾನುಭೂತಿ ತೋರಿಸುತ್ತಲೇ ಮಾನಭಂಗಕ್ಕೆ ಹವಣಿಸುತ್ತಾರೆ. ಇಂತಹ ಹೇಯ ನಡವಳಿಕೆಯನ್ನು ಓಎಲ್ಎನ್, ಅನುವಾದಕರಾಗಿ ತಮ್ಮ ಮಾತುಗಳಲ್ಲಿ ಹೇಳುವುದು ಹೀಗೆ: "ತನ್ನ ಬಣ್ಣಿಸದ, ಇದಿರ ಹಳಿಯದ ನೆರೂಡ ಗುಣ. ಹಲವು ಹೆಣ್ಣುಗಳ ಜೊತೆ ಇದ್ದ ಸಂಬಂಧವನ್ನು ವೈಭವಿಸದೆ, ನೈತಿಕ ನರಳಾಟವಿಲ್ಲದೆ, ನಡೆದದ್ದು ಹೀಗೆ ಎಂದು ನೆರೂಡ ಹೇಳಿಕೊಳ್ಳುತ್ತಾನೆ" ಹಾಗಿದ್ದಲ್ಲಿ, ಮೇಲೆ ಉಲ್ಲೇಖಿಸಿದ ಸಾಲುಗಳನ್ನು ಬರೆದವರಾರು?

ಅನುವಾದಕರು ಮೂಲ ಪಠ್ಯಕ್ಕೆ ನಿಷ್ಠರಾಗಿರಬೇಕು. ಮೂಲದಲ್ಲಿನ ಒಂದು ಪದವನ್ನೂ ತೆಗೆಯಬಾರದು, ತನ್ನದೇ ಆದ ಒಂದು ಪದವನ್ನೂ ಸೇರಿಸಬಾರದು. ಅದು ಅನುವಾದದ ಎಥಿಕ್ಸ್‌ಗೆ ತಕ್ಕನಾದುದಲ್ಲ ಅನ್ನುವ ವಾದದ ಬಗ್ಗೆ ನನಗೆ ಯಾವ ದೊಡ್ಡ ತಕರಾರು ಇಲ್ಲವಾದರೂ, ಅನುವಾದಕರು ತಮ್ಮ ಪ್ರಸ್ತಾವನೆಯಲ್ಲಿ ಒಂದು ಕೃತಿಯನ್ನು ತಾವು ಏಕೆ ಅನುವಾದ ಮಾಡಿದರು, ಅಲ್ಲಿನ ಯಾವ ಸಂಗತಿಗಳ ಬಗ್ಗೆ ತಮಗೆ ಪ್ರಶಂಸೆಯಿಂದೆ, ಆಕ್ಷೇಪವಿದೆ, ಖೇದವಿದೆ, ವಿರೋಧವಿದೆ, ಖಂಡನೆಯಿದೆ ಮುಂತಾದವನ್ನು ಖಂಡಿತ ದಾಖಲಿಸಬಹುದು. ದಾಖಲಿಸಲೇಬೇಕು. ಆಗಲಷ್ಟೇ ಯಾವುದೇ ಅನುವಾದದ ಘನತೆ ಹೆಚ್ಚುತ್ತದೆ. ತಾನು ಅನುವಾದಿಸುವ ಕೃತಿಗೂ, ತನಗೂ ಯಾವುದೇ ಸಂಬಂಧವಿಲ್ಲ ಎಂಬಂತಹ ಧೋರಣೆ ಸಲ್ಲದು. ಅನುವಾದದ ಎಥಿಕ್ಸ್ ಅಥವಾ ನೀತಿಶಾಸ್ತ್ರವು ಅನುವಾದಕರ ಪಾತ್ರವನ್ನು ಅರ್ಥದ ನಿಷ್ಕ್ರಿಯ ಮಾರ್ಗವಾಗಿ ಪರಿಗಣಿಸುವ ಬದಲು ಸಕ್ರಿಯ ಮಧ್ಯವರ್ತಿಯಾಗಿ ಪರಿಗಣಿಸುತ್ತದೆ. ಕೆಲವು ಅನುವಾದಕರು ತಮ್ಮ ಅನುವಾದದ ಆಯ್ಕೆಗಳ ಮೂಲಕ ತಾವು ಅನುವಾದಿಸುವ ಭಾಷೆಯಲ್ಲಿ ಸಂಕಥನವೊಂದನ್ನು ರೂಪಿಸುತ್ತಾರೆ ಮತ್ತು ಸೈದ್ಧಾಂತಿಕ ದೃಷ್ಟಿಕೋನಗಳನ್ನು ಪ್ರಭಾವಿಸುತ್ತಾರೆ. ಹಾಗಾಗಿ, ಪ್ರತಿಯೊಬ್ಬ ಅನುವಾದಕರು ಅನುವಾದದೊಂದಿಗೆ ವಿಮರ್ಶಕನ ಕೆಲಸನ್ನೂ ಮಾಡಬೇಕಾಗುತ್ತದೆ. ಈ ಪುಸ್ತಕದಲ್ಲಿ ಈ ಅನುವಾದವನ್ನು ಓದಿ, ಮೆಚ್ಚಿದ್ದಾರೆಂದು ಹೇಳಲಾಗಿರುವವರೆಲ್ಲರೂ ಕನ್ನಡದ ಹೆಸರಾಂತ ಸಾಹಿತಿಗಳು, ವಿಮರ್ಶಕರು. ಅನುವಾದದ ಕರಡನ್ನು ತಿದ್ದಿ, ಪ್ರಶಂಸೆಯ ಮಾತುಗಳನ್ನಾಡಿರುವವರು ಜನಪರ, ಮಹಿಳಾಪರ ಹೋರಾಟಗಳಲ್ಲಿ ತೊಡಗಿಸಿಕೊಂಡಿರುವವರಾದ ಎಚ್.ಎಸ್. ಅನುಪಮಾ. ಇಷ್ಟೊಂದು ಮಂದಿಗೆ ನೆರೂಡ ಒಬ್ಬ ಅಂತ್ಯಜ ಮಹಿಳೆಯ 'ರೇಪ್' ಮಾಡಿರುವುದು ಖಂಡನಾರ್ಹ ವಿಷಯವಾಗಿ ಕಾಣದಿರುವುದು ಏನನ್ನು ಸೂಚಿಸುತ್ತದೆ?

ನೆರೂಡ, "ಕಾನ್ಸುಲರ್ ಹುದ್ದೆಗಳಲ್ಲಿ ಸೇವೆ ಸಲ್ಲಿಸುತ್ತಿರುವಾಗ, ಬರಹ ಪುಟದಿಂದಾಚೆ, ಮಹಿಳೆಯರು, ಸ್ಥಳೀಯ ವರ್ಣೀಯರು ಮತ್ತು ಬಡವರನ್ನು ಅವಹೇಳನ ಮಾಡುವ ಮತ್ತು ನಿಗ್ರಹಿಸುವಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ವರ್ಷಗಳ ನಂತರ, ಅವರು ತಮ್ಮ ಆತ್ಮಕಥನದಲ್ಲಿ, ಶ್ರೀಲಂಕಾದಲ್ಲಿ ತಮಿಳು ಸೇವಕಿಯೊಬ್ಬಳ ಮೇಲೆ ಅತ್ಯಾಚಾರ ಮಾಡಿದ್ದನ್ನು ವಿವರಿಸಿದ್ದಾರೆ, ಇದು ತುಳಿತಕ್ಕೊಳಗಾದವರ ಪರವಾಗಿ ಕಾರ್ಯಕರ್ತನಾಗಿ ಅವರ ಭವಿಷ್ಯದ ಪರಂಪರೆಗೆ ಕಳವಳಕಾರಿ ಪದರವನ್ನು ಸೇರಿಸಿದೆ" ಎಂದು ನೆರೂಡ ಬದುಕು-ಬರಹಗಳ ಸಂಶೋಧಕ ಮೈಕ್ ಐಸ್ನರ್ ಆತಂಕ ವ್ಯಕ್ತಪಡಿಸಿದ್ದಾರೆ. ಇದಕ್ಕೆ ಪೂರಕವೆಂಬಂತೆ, ಪತ್ರಕರ್ತ ಸುಗತ ಶ್ರೀನಿವಾಸರಾಜು ಅವರು 2013ನೇ ಇಸವಿಯ ಜೂನ್ ಎರಡನೇ ತಾರೀಖಿನ 'ವಿಜಯ ಕರ್ನಾಟಕ' ಪತ್ರಿಕೆಯ ಅಂಕಣ 'ಬೈಠಕ್'ನಲ್ಲಿ